9

ಲಂಚಕ್ಕೆ ಸಂಚಕಾರ

ಮತ್ತು

ಇತರ ವಿನೋದ

ಕಥಾನಕಗಳು.

ಸಂಗ್ರಾಹಕರು:

ಡಾ। ಎಸ್. ಪಿ. ಭಟ್.

ಮಂಗಳೂರು.

1954.

ಒಂದಾಣೆ ಮಾಲೆ

1 ANNA

‘ಒಂದಾಣೆ ಮಾಲೆ’ಯಲ್ಲಿ ಪ್ರಕಟವಾಗುವ ಕೆಲವು ವಿಷಯಗಳು

ಸಣ್ಣ ಕತೆಗಳು	ಪ್ರಹಸನಗಳು
ನೀಳ್ಗತೆಗಳು	ಏಕಾಂಕ ನಾಟಕಗಳು
ವ್ಯಕ್ತಿ ಚಿತ್ರ	ದೇಶ-ವಿದೇಶ ಚರಿತ್ರೆ
ವಿಜ್ಞಾನ	ಚಿಕ್ಕ ನಿಘಂಟುಗಳು
ಶಿಲ್ಪ	ಜಗತ್ತಿನ ಶ್ರೇಷ್ಠ ತತ್ವಜ್ಞಾನಿಗಳ ಉಪದೇಶ
ಲಲಿತಕಲೆ	ಸೃಷ್ಟಿಯ ವೈಚಿತ್ರ್ಯಗಳು
ಗೃಹವೈದ್ಯ	ಶೈಕ್ಷಣಿಕ ವಿಚಾರಗಳು
ಗೃಹಿಣಿಯರಿಗೆ	ಕ್ಷೇತ್ರಗಳ ವಿವರ
ಉಪಯುಕ್ತ ಸಲಹೆಗಳು	
ಸುಭಾಷಿತ	ವಾಙ್ಮಯ ವಿಚಾರ
ಪ್ರಯಾಣ ಕತೆಗಳು	ಸತ್ಯ ಕಥಾನಕಗಳು

ಶ್ರೀ| ಕೋ. ಶ. ಕಾರಂತ, ಬಿ.ಎ., ಬಿ.ಎಲ್, ಶ್ರೀ| ಡಿ. ಪುಟ್ಟಸ್ವಾಮಿ, ಬಿ. ಎ., ಬಿ. ಎಲ್., ಎಡ್ವೊಕೇಟ್, ವೈದ್ಯಗುರು ಎಂ. ಆರ್. ಭಟ್, ದಿ| ಎಮ್. ಎನ್. ಕಾಮತ್, ಶ್ರೀ| ಪಿ. ಎಸ್. ವೆಂಕಟಕೃಷ್ಣ ರಾವ್, ಎಂ.ಎ., ಬಿ.ಟಿ, ಶ್ರೀ| ಎಮ್. ಸುಬ್ರಾಯನ್, ವಿದ್ವಾನ್, ಶ್ರೀ| ಕುಡ್ಪಿ ವಾಸುದೇವ ಶೆಣೈ, ಶ್ರೀ| ಎಲ್. ಎಸ್. ನಾಯಕ, ಡಾ| ಎಸ್. ಪಿ. ಭಟ್– ಮೊದಲಾದವರ ಲೇಖನಗಳು ‘ಒಂದಾಣೆ ಮಾಲೆ’ಯಲ್ಲಿ ಪ್ರಕಟವಾಗುವುವು.

ಕೆಲವು ಪ್ರಕಟಣೆಗಳು 32, 40, 48 ಅಥವಾ ಹೆಚ್ಚು ಪುಟಗಳಿರುವುವು. ಆದರೆ, ಯಾವ ಪ್ರಕಟಣೆಯೂ ಹದಿನಾರು ಪುಟಗಳಿಗಿಂತ ಕಡಿಮೆ ಇರುವುದಿಲ್ಲ.

ಒಂದಾಣೆ ಮಾಲೆ,

ಪ್ರಭಾತ ಆಫೀಸು, ರಥಬೀದಿ, ಮಂಗಳೂರು—೧.

ಲಂಚಕ್ಕೆ ಸಂಚಕಾರ

ಮತ್ತು ಇತರ ವಿನೋದ ಕಥಾನಕಗಳು

....

ಲಂಚಕ್ಕೆ ಸಂಚಕಾರ

ಸುಂಕದಕಟ್ಟೆಯಲ್ಲಿನ ಶೋಧಕನನ್ನು ಕುರಿತು ಒಬ್ಬ ವ್ಯಾಪಾರಿಯು, "ಅಣ್ಣಾ, ನಾಳೆ ನಾನು ಒಂದು ಕಟ್ಟು ಭಂಗಿ ತರಬೇಕೆಂದಿರುವೆನು, ನೀನು ನನ್ನ ಮೇಲೆ ದಯೆದೋರಿದರೆ ನಿನಗೆ ಚೆನ್ನಾಗಿ ಕೈಬಿಸಿಮಾಡುತ್ತೇನೆ," ಎಂದು ಹೇಳಿ ಹೊರಟುಹೋದನು.

ಮರುದಿನ ಅವನನ್ನು ಕಂಡಕೂಡಲೇ ಆ ಶೋಧಕನು ಲಂಚದ ಮಾತನ್ನೇ ಎತ್ತದೆ ಅವನನ್ನು ತನ್ನ ಮೇಲಧಿಕಾರಿಯ ಬಳಿಗೆ ಎಳೆದೊಯ್ದು, ಆತನೊಡನೆ ಹಿಂದಿನ ದಿನದ ಅವನ ಮಾತನ್ನು ಹೇಳಿದನು. ಒಡನೆ ಇಬ್ಬರೂ ಸೇರಿ ಅವನನ್ನು ಝಡ್ತಿಮಾಡಿ ನೋಡಿದರಾದರೂ ಅವನ ಬಳಿ ಏನೂ ಸಿಕ್ಕದೇ ಹೋಯಿತು. ಆಗ ನಿರಾಶೆಪಟ್ಟು ಅವನನ್ನು ಹೋಗ ಬಿಟ್ಟರು.

ಶೋಧಕ (ವ್ಯಾಪಾರಿಯು ಹೋಗುತ್ತಿದ್ದಾಗ, ಅವನನ್ನು ಸಮೀಪಿಸಿ, ಗುಟ್ಟಾಗಿ): "ಅಯ್ಯಾ, ಹಾಗಾದರೆ ನೀವು ನಿನ್ನೆ ಹಾಗೆಂದುದೇಕೆ?"

ವ್ಯಾಪಾರಿ: "ಆ ಭಂಗಿಯ ಕಟ್ಟು ನನ್ನೊಡನೆ ನಿನ್ನೆಯೇ ಇತ್ತು!"

o o o o o o

ಒಳ್ಳೆಯ ಶಿಫಾರಸು

ಒಬ್ಬ ದರ್ಜಿಯು ತನ್ನ ಗಿರಾಕಿಗಳನ್ನು ಹೆಚ್ಚಿಸಿಕೊಳ್ಳುವ ಅಭಿಲಾಷೆಯಿಂದ, ಮುಂದಿನ ಎರಡು ವಾರಗಳ ವರೆಗೆ ಅಂಗಿ, ಒಳ ಅಂಗಿ, ಇಜಾರುಗಳ ಒಂದೊಂದು 'ಸೂಟ'ನ್ನು ಬರೇ ಹತ್ತು ರೂಪಾಯಿಗೆ ಕೊಡುವನಾಗಿ ಪ್ರಕಟಿಸಿದನು.

ಮರುದಿನವೇ ಆರೂವರೆ ಅಡಿ ಎತ್ತರದ ಒಬ್ಬನು ಬಂದು ತನಗೆ ಒಂದು ಸೂಟ್ ಬೇಕೆಂದು ಹೇಳಿ, ಅಳತೆ ತೆಗಿಸಲು ನಿಂತನು.

ದರ್ಜಿಯು, "ನಿಮ್ಮಿಂದ ನನಗೆ ಹೆಚ್ಚು ನಷ್ಟವಾಗುವುದು. ಆದರೆ ನೀವು ನಿಮ್ಮ ಸ್ನೇಹಿತರೊಡನೆ ನನ್ನ ಶಿಫಾರಸು ಮಾಡಿ ಅವರನ್ನೂ ನನ್ನಲ್ಲಿಗೆ ಕಳುಹಿಸಿಕೊಡುವಿರಾದ ಪಕ್ಷಕ್ಕೆ ಈ ಸೂಟನ್ನು ಮಾಡಿಕೊಡುವೆನು," ಎಂದನು.

ಅವನು ಒಪ್ಪಿಕೊಂಡನು; ದರ್ಜಿಯು ಸೂಟನ್ನು ತಯಾರಿಸಿ ಕೊಟ್ಟನು.

ಐದು ದಿನಗಳಲ್ಲೇ ಸುಮಾರು ಏಳಡಿ ಎತ್ತರವೂ, ಎಂಟು-ಹತ್ತು ಮಣ ಭಾರವೂ ಇದ್ದ ಇನ್ನೊಬ್ಬ ಭೀಮಕಾಯನಾದ ಮನುಷ್ಯನು ಅವನ ಅಂಗಡಿಯನ್ನು ಹೊಕ್ಕನು.

ಅವನು, "ನನ್ನ ತಮ್ಮನು ನಿಮ್ಮ ಶಿಫಾರಸು ಮಾಡಿರುವನು. ನನಗೆ, ನೀವು ಅವನಿಗೆ ಮಾಡಿಕೊಟ್ಟಂತಹ ಆರು ಸೂಟುಗಳನ್ನು ತಯಾರಿಸಿ ಕೊಡಿ," ಎಂದನು.

ದರ್ಜಿಯು ನಿಂತಲ್ಲೇ ಕುಳಿತುಬಿಟ್ಟನು!

o o o o o o

ಸಂಕಷ್ಟ ನಿವಾರಣೆ

ಒಂದು ಕಾಡಿನಲ್ಲಿ ಇಬ್ಬರು, ಕೋವಿಗಳೊಡನೆ ಪಕ್ಷಿಗಳನ್ನು ಬೇಟೆ ಮಾಡುತ್ತಿದ್ದರು. ಅವರ ಲಾಯ್‌ಸೆನ್ಸಿನ ವಿಷಯವಾಗಿ ಸಂಶಯಪಟ್ಟ ಒಬ್ಬ ಪೊಲೀಸನು ಅವರ ಕಡೆಗೆ ಬರುತ್ತಿದ್ದುದನ್ನು ದೂರದಿಂದಲೇ ಕಂಡು ಅವರಲ್ಲೊಬ್ಬನು ಪಲಾಯನಸೂತ್ರವನ್ನು ಪಠಿಸತೊಡಗಿದನು. ಆಗ ಪೊಲೀಸನ ಅನುಮಾನವು ಬಲವಾಗಿ, ಅವನು ಆತನನ್ನು ಹಿಂಬಾಲಿಸಿ ಕೊಂಡು ಹೋದನು. ಬಹಳ ದೂರ ಓಡಿದ ನಂತರ ಪೊಲೀಸನಿಗೆ ಆತನು ಸಿಕ್ಕಿದನು. ಒಡನೆ ಪೊಲೀಸನು ಆತನ ಲಾಯ್‌ಸೆನ್ಸನ್ನು ಕೇಳಲು ಆತನು ಅದನ್ನು ಕೂಡಲೇ ತೋರಿಸಿದನು.

ಪೊಲೀಸನು: "ಎಲ! ನಿನ್ನ ಹತ್ತಿರ ಲಾಯ್‌ಸೆನ್ಸಿದ್ದೂ ಇಷ್ಟು ದೂರ ಓಡಿಬರಲು ಕಾರಣವೇನು?"

ಬೇಟೆಗಾರ: "ಅಲ್ಲಿ ನಿಂತಿದ್ದ ನನ್ನ ಜತೆಗಾರನೊಡನೆ ಲಾಯ್‌ಸೆನ್ಸಿರಲಿಲ್ಲ!"

ೲ ೲ ೲ ೲ ೲ ೲ

ಸಮಾನವಾದ ಅಂತಃಕರಣ

ನವೀನವಾಗಿ ಲಗ್ನವಾದ ವಧೂವರರಿಬ್ಬರೊಳಗೆ ಹೆಂಡತಿಯು ಗಂಡನಿಗೆ ದುಃಖವನ್ನುಂಟುಮಾಡುವಂತಹ ಒಂದು ಮಾತನ್ನು ಆಕಸ್ಮಿಕವಾಗಿ ಪ್ರಮಾದವಶದಿಂದ ಆಡಿಬಿಟ್ಟಳು.

ಒಡನೆ ಅವಳು, ಪಶ್ಚಾತ್ತಾಪದಿಂದ, "ಹಾ, ಪ್ರಾಣಾಧಿಕ! ನಿಮಗೆ ದುಃಖವನ್ನುಂಟುಮಾಡಿದೆನೇ?" ಎಂದು ಕೇಳಿದಳು.

ಅವನು, "ಇಲ್ಲ, ಪ್ರಿಯೆ! ನನಗೆ ದುಃಖವನ್ನುಂಟುಮಾಡಿದೆಯೆಂಬ ಯೋಚನೆಯು ನಿನಗೆ ದುಃಖವನ್ನುಂಟುಮಾಡುವುದೆಂದು ತಿಳಿಯಲು ನನಗೆ ದುಃಖವಾಗುವುದು," ಎಂದು ಉತ್ತರಕೊಟ್ಟನು.

ಅವಳು, "ಅದಕ್ಕಾಗಿ ನೀವು ಸ್ವಲ್ಪವೂ ದುಃಖಿಸಬೇಕಾಗಿಲ್ಲ. ನಾನು ನಿಮಗೆ ದುಃಖವನ್ನುಂಟುಮಾಡುವುದರಿಂದ ನನಗೇ ದುಃಖವುಂಟಾಗುವುದೆಂಬ ಭಾವನೆಯಿಂದ ನಿಮಗೆ ದುಃಖವುಂಟಾಗುವುದೆಂದು ತಿಳಿಯಲು ನನಗೆ ದುಃಖವಾಗುವುದು," ಎಂದಳು.

ಅವನು, "ಇಲ್ಲ, ಇಲ್ಲ, ಪ್ರಾಣಪ್ರಿಯೆ! ನನಗೆ ದುಃಖವನ್ನುಂಟುಮಾಡಿದೆಯೆಂದು ಭಾವಿಸುವುದರಿಂದ ನಿನಗೇ ದುಃಖವನ್ನುಂಟುಮಾಡಿಕೊಂಡುದಕ್ಕಾಗಿ ನನಗೆ ದುಃಖವುಂಟಾಯಿತೆಂಬ ಕಲ್ಪನೆಯಿಂದ ನಿನಗೆ ದುಃಖವುಂಟಾಯಿತೆಂದು ತಿಳಿಯಲು ನನಗೆ ದುಃಖವಾಗುವುದು," ಎಂದು ವ್ಯಕ್ತಪಡಿಸಿದನು.

ಅವರನ್ನು ನಾವು ಇಷ್ಟರಲ್ಲೇ ಬಿಡುವುದು ಉತ್ತಮ. ಅದನ್ನು ಅವರು ಸಕಾಲದಲ್ಲೇ ಪರಿಹರಿಸಿಕೊಂಡಾರು.

ೲ ೲ ೲ ೲ ೲ ೲ

ತಪ್ಪಲ್ಲ!

ಶಾಲಾಪರೀಕ್ಷೆಯ ಸಮಯದಲ್ಲಿ ಇನ್‌ಸ್ಪೆಕ್ಟರರು ಮಕ್ಕಳಿಗೆ ಅನೇಕ ಬೇರೆಬೇರೆ ಪ್ರಶ್ನೆಗಳನ್ನು ಕೇಳುತ್ತಿದ್ದರು.

ಅವರು ಒಬ್ಬ ಚಿಕ್ಕ ಹುಡುಗನಿಗೆ, "ಒಂದು ವರ್ಷಕ್ಕೆ ಎಷ್ಟು ವಾರಗಳು?" ಎಂದು ಪ್ರಶ್ನೆ ಹಾಕಲು, ಆತನು, "ಏಳು," ಎಂದು ಗಂಭೀರವಾಗಿ ಉತ್ತರಕೊಟ್ಟನು.

ಇತರ ಹುಡುಗರ ನಗಾಟದ ಕಿಲಕಿಲ ಶಬ್ದವು ನಿಂತೊಡನೆ ಇನ್ಸ್ಪೆಕ್ಟರರು, "ನಾನು ಒಂದು ವಾರಕ್ಕೆ ಎಷ್ಟು ದಿನಗಳೆಂದು ಕೇಳಿದ್ದಲ್ಲ. ಈಗ ಇನ್ನೊಮ್ಮೆ ಉತ್ತರಕೊಡಲು ಪ್ರಯತ್ನಮಾಡು: ಒಂದು ವರ್ಷದಲ್ಲಿ ಎಷ್ಟು ವಾರಗಳಿವೆ?" ಎಂದು ಕೇಳಿದರು.

ಹುಡುಗನು ಒಂದುಕ್ಷಣ ಗಲಿಬಿಲಿಪಟ್ಟಂತೆ ತೋರಿ, ಬಳಿಕ, "ಸೋಮವಾರ, ಮಂಗಳವಾರ, ಬುಧವಾರ, ಗುರುವಾರ, ಶುಕ್ರವಾರ, ಶನಿವಾರ, ಆದಿತ್ಯವಾರ. ಇದಕ್ಕಿಂತಲೂ ಹೆಚ್ಚು ವಾರಗಳಿದ್ದರೆ ನಾನು ಅವುಗಳನ್ನು ಕೇಳಲೇ ಇಲ್ಲ," ಎಂದನು.

o o o o o o

ಸಮಸ್ಯೆ

ಒಬ್ಬ ಹಳ್ಳಿಗನು ಒಬ್ಬ ಫೋಟೋಗ್ರಾಫರನ ಅಂಗಡಿಯ ಮುಂದೆ ತೂಗಹಾಕಿದ್ದ ನಕ್ಷೆಗಳನ್ನು ನೋಡಿದನು. ಅವುಗಳಲ್ಲಿ ಒಂದು, ಯಮನ ಪಾತ್ರದಲ್ಲಿದ್ದ ಒಬ್ಬ ನಟನದಾಗಿತ್ತು.

ಆ ನಕ್ಷೆಯನ್ನು ಸ್ವಲ್ಪ ಸಮಯದ ವರೆಗೆ ದಿಟ್ಟಿಸಿ ನೋಡಿ, ಅವನು ಅಂಗಡಿಯೊಳಗೆ ಹೋಗಿ, ಒಂದೇ ಪಠದಲ್ಲಿ ತನ್ನ ಮತ್ತು ತನ್ನ ಹೆಂಡತಿಯ ನಕ್ಷೆಗಳನ್ನು ತಯಾರಿಸಿಕೊಡಬೇಕೆಂದನು. ಫೋಟೋಗ್ರಾಫರನು, ಆತನ ಹೆಂಡತಿಯು ಎಲ್ಲಿರುವಳೆಂದು ಕೇಳಿದನು.

ಹಳ್ಳಿಗನು, "ಅವಳು ಊರಲ್ಲೇ ಇದ್ದಾಳೆ," ಎಂದು ಉತ್ತರಕೊಟ್ಟನು.

ಫೋಟೋಗ್ರಾಫರನು, "ಹಾಗಾದರೆ ಅವಳ ನಕ್ಷೆ ಹೇಗೆ ತೆಗೆಯಲಿ?" ಎಂದು ಕೇಳಿದನು.

ಹಳ್ಳಿಗನು, "ಯಾಕೆ? ಯಮನ ನಕ್ಷೆಯನ್ನು ನೀವು ಹೇಗೆ ತೆಗೆದಿರಿ? ಅವನು ಸ್ವತಃ ಇಲ್ಲಿಗೆ ಬಂದಿದ್ದನೇ? ಅಥವಾ ನೀವೇ ಅವನಿದ್ದಲ್ಲಿಗೆ ಹೋಗಿದ್ದಿರಾ?" ಎಂದು ಬೆರಗಾಗಿ ಕೇಳಿದನು.

o o o o o o

ಸಫಲ ಮನೋರಥ

ಒಂದು ದಿನ ಮುಂಜಾನೆ ಒಬ್ಬ ಪಟ್ಟಣಿಗನು ಒಂದು ಹಳ್ಳಿಯ ಟಪ್ಪಾಲುಕಟ್ಟೆಗೆ ಬಂದು, ತನಗೆ ಒಂದು ತಂತಿ ಬಂದಿರುವುದೋ ಎಂದು ವಿಚಾರಿಸಿದನು. ಪೋಸ್ಟ್ ಮಾಸ್ತರನು ಇಲ್ಲವೆನ್ನುತ್ತಲೇ, ಆತನು ಬಹಳ ಗಲಿಬಿಲಿಪಟ್ಟಂತೆ ಕಂಡುಬಂತು.

ಒಂದು ಘಂಟೆ ಕಳೆದ ಮೇಲೆ ಆತನು ತಿರುಗಿ ಬಂದು ಮೊದಲಿನಂತೆಯೇ ನಕಾರದ ಉತ್ತರವನ್ನು ಪಡೆದನು. ಇದರಿಂದ ಆತನು ಮುಂಚಿಗಿಂತಲೂ ಹೆಚ್ಚಾಗಿ ಗಾಬರಿಹೊಂದಿದಂತೆ ತೋರಿತು.

ಇದೇ ಪ್ರಕಾರದ ಆತನ ಹಲವು ನಿಷ್ಫಲ ಪ್ರಯತ್ನಗಳ ಬಳಿಕ, ಕೊನೆಯಲ್ಲಿ ಪೋಸ್ಟ್‌ಮಾಸ್ತರನು ಆಗತಾನೇ ಬಂದಿದ್ದ ಒಂದು ತಂತಿಯನ್ನು ಆತನಿಗೆ ಕೊಟ್ಟನು.

ಆತನು ಅದನ್ನು ನಡುಗುವ ಕೈಗಳಿಂದ ಅವಸರನಾಗಿ ತೆರೆದುನೋಡಿ, “ಹಾ! ಸರ್ವನಾಶ! ನನ್ನ ಮನೆಗೆ ಬೆಂಕಿ ಬಿದ್ದಿರುವುದಂತೆ!” ಎಂದು ವ್ಯಕ್ತಪಡಿಸಿದನು.

○ ○ ○ ○ ○ ○

ಆತ್ಮಸಂರಕ್ಷಣೆ

ಕಳ್ಳನು, ಮಲಗುವ ಕೋಣೆಯನ್ನು ಹೊಗುತ್ತಿದ್ದುದನ್ನು ಕೇಳುತ್ತಲೇ ಅವನು ಮಲಗಿದಲ್ಲಿಂದ ಎದ್ದು ಸದ್ದುಮಾಡದೆ ಹೋಗಿ ಮಂಚದ ಅಡಿಯನ್ನು ಸೇರಿದನು.

ಸ್ವಲ್ಪ ಸಮಯದ ಮೇಲೆ ಇನ್ನು ಯಾರೋ ತನ್ನ ಬಳಿಗೆ ಸರಿಯುತ್ತಿದ್ದುದು ಅವನ ಅನುಭವಕ್ಕೆ ಬಂತು.

“ಯಾರು, ಗಂಗುವೇ?” ಅವನು ಪಿಸುಮಾತಿನಲ್ಲಿ ಕೇಳಿದನು.

“ಅಲ್ಲ; ನಾನು ಕಳ್ಳ. ನಿನ್ನ ಹೆಂಡತಿಯನ್ನು ನಾನು ಈಗತಾನೇ ನೋಡಿದೆನು. ಸ್ವಲ್ಪ ಆಚೆಗೆ ಸರಿ,” ಎಂದು ಅವನಿಗೆ ಪಿಸುಮಾತಿನಲ್ಲೇ ಉತ್ತರ ಸಿಕ್ಕಿತು.

○ ○ ○ ○ ○ ○

ತಿರುಗು-ಮುರುಗು

ಒಬ್ಬ ಹಳ್ಳಿಗನು ಬಳಿಯ ಗದ್ದೆಯ ಕಡೆಯಿಂದ ಒಂದು ಮನೆಗೆ ಓಡಿ ಬಂದು ಒಂದು ಹಾರೆಯನ್ನು ಕೇಳಿದನು. ಮನೆಯವರು ಯಾಕೆಂದು ಕೇಳಿದಾಗ ಕೊಳಕು ಹೊಂಡದಲ್ಲಿ ಹೂತುಹೋದ ತನ್ನ ಯಜಮಾನನನ್ನು ಮೇಲೆ ತೆಗೆಯುವುದಕ್ಕೆಂದು ಹೇಳಿದನು.

"ಅವರು ಹೆಚ್ಚು ಹೂತುಹೋಗಿರುವರೇ?"

"ಹೌದು, ಕಣಕಾಲಿನ ವರೆಗೆ ಹೂತುಹೋಗಿರುವರು, ಸ್ವಾಮಿ!"

"ಅಷ್ಟೇ ಆದರೆ ಅದಕ್ಕೆ ಹಾರೆಯೇಕೋ, ಮಂಕೆ?"

"ಆದರೆ, ಅವರು ತಲೆಕೆಳಗಾಗಿ ಬಿದ್ದಿರುವರು, ಸ್ವಾಮಿ!"

o o o o o o

ತಪ್ಪು ಯಾರದು?

ಕೊಠಡಿಯೊಳಗಿನ ವಾತಾವರಣವು ಅವಿಶ್ರಾಂತತೆಯಿಂದ ತುಂಬಿ ಹೋಗಿತ್ತು. ಮೋಹನನು ಒಂದು ವರ್ತಮಾನ ಪತ್ರಿಕೆಯನ್ನು ಓದ ಬೇಕೆಂದಿದ್ದನು; ಆದರೆ ಮೋಹಿನಿಯು ಸಂಭಾಷಣೆಮಾಡಲು ಆತುರ ಪಟ್ಟಳು.

ಕಡೆಗೆ ಅವನು ಸಿಟ್ಟನ್ನು ಸೈರಿಸಲಾರದೆ ಪತ್ರಿಕೆಯನ್ನು ತೆಗೆದು ನೆಲಕ್ಕೆ ಅಪ್ಪಳಿಸಿ ಹೆಂಡತಿಯನ್ನು ಎದುರಿಸಿದನು.

"ಇಗೋ, ನೋಡು! ನಾನು ಮನೆಯಲ್ಲಿರುವಾಗ ನಿತ್ಯವೂ ನೀನು ಒಂದೋ ಹಾರ್ಮೋನಿಯಮ್ಮನ್ನು ಅರಚಿಸುತ್ತಿರುವಿ, ಇಲ್ಲವೇ ನಿನ್ನ ನಾಲಿಗೆಯನ್ನು ನಾಗಾಲೋಟಕ್ಕೆ ಬಿಡುತ್ತಿರುವಿ! ನಾವು ಮದುವೆಯಾದ ಕೆಲಕಾಲದ ವರೆಗೆ ನೀನು ಎಷ್ಟೋ ಶಾಂತಳಾಗಿದ್ದಿ!" ಅವನು ಬುಸು ಗುಟ್ಟಿದನು.

"ಹೌದು, ನಾನು ಶಾಂತಳಾಗಿದ್ದೆ, ನಿಜ. ಆದರೆ, ಮದುವೆಯಾಗುವ ಮುಂಚೆ ನೀವು ಯಾವಾಗಲೂ ನನ್ನ ಕೈಗಳನ್ನು ಹಿಡಿದುಕೊಂಡೇ ಇರು ತ್ತಿದ್ದಿರಿ; ಅದರಿಂದ ನನಗೆ ಹಾರ್ಮೋನಿಯಮ್ ಬಾರಿಸಲಾಗುತ್ತಿರಲಿಲ್ಲ!" ಎಂದು ಅವಳು ಸಿಡುಗುಟ್ಟಿದಳು.

o o o o o o

ಪಟ್ಟಣವಾಸದ ಪರಿಣಾಮ

ಒಬ್ಬ ಹಳ್ಳಿಯ ಹುಡುಗಿಯು ತನ್ನ ತಂದೆಯ ಅಪೇಕ್ಷೆಗೆ ವಿರುದ್ಧವಾಗಿ ಪಟ್ಟಣದ ವಿದ್ಯಾರ್ಥಿನೀ ಭವನವನ್ನು ಹೋಗಿ ಸೇರಿದಳು. ಪಟ್ಟಣದ ರೀತಿಗಳಿಂದ ಮಗಳು ಹಾಳಾಗುವಳೆಂಬುದೇ ತಂದೆಯ ಆಕ್ಷೇಪವಾಗಿತ್ತು.

ಕೆಲವು ದಿನಗಳಲ್ಲೇ ಹುಡುಗಿಯು ತನ್ನದೊಂದು ಕಾಗದದಲ್ಲಿ, "ನಾನು ಪಿಂಗ್-ಪೊಕಂಗನ್ನು ಬಹಳವಾಗಿ ಪ್ರೀತಿಸುತ್ತೇನೆ," ಎಂದು ಬರೆದಿದ್ದಳು.

ತಾಯಿಯು ಮಗಳ ಕಾಗದವನ್ನು ತನ್ನ ಗಂಡನಿಗೆ ಓದಿಹೇಳಿದೊಡನೆ, ಆತನು, ಅವಳ ಮೇಲೆ ಕೋಪದಿಂದ ಉರಿದುಬಿದ್ದು, "ನಾನು ಮೊದಲೇ ಹೇಳಲಿಲ್ಲವೇ? ಈಗ ನನ್ನ ಮಾತು ಸರಿಯಾಯಿತು ನೋಡು! ಈ ಪಟ್ಟಣದ ವಿದ್ಯಾಭ್ಯಾಸದಿಂದ ಎಂತಹ ಪುರುಷಾರ್ಥವೂ ದೊರೆಯಲಾರದೆಂದು ನನಗೆ ಮೊದಲೇ ತಿಳಿದಿತ್ತು ಈಗ ಅವಳು ಒಬ್ಬ ಕೆಟ್ಟ ಚೀನಿಯವನ ಬಲೆಯಲ್ಲಿ ಬಿದ್ದಿರುವಳು, ನೋಡಿದೆಯಾ?" ಎಂದು ದೂರಿದನು.

o o o o o o

ಸುಭದ್ರ

ತುಂಟ ರಾಮುವಿಗೆ ಅವನ ತಾಯಿಯು, ಪುಟ್ಟ ತಮ್ಮನನ್ನು ಬೀದಿಗೆ ಓಡಿಹೋಗದಂತೆ ನೋಡಿಕೊಂಡಿರಲು ಹೇಳಿ, ತನ್ನ ಕೆಲಸದ ಮೇಲೆ ಹೋದಳು. ಸ್ವಲ್ಪ ಸಮಯದ ಬಳಿಕ ರಾಮು ಒಬ್ಬನೇ ತೋಟದಲ್ಲಿ ಆಡಿಕೊಂಡಿದ್ದುದು ಅವಳ ಕಣ್ಣಿಗೆ ಬಿತ್ತು.

ಅವಳು, ರಾಮುವನ್ನು ಕರೆದು, "ಎಲಾ, ಕಿಟ್ಟು ಎಲ್ಲಿಯೋ?" ಎಂದು ಕೇಳಿದಳು.

ರಾಮು: "ಅವನು ಭದ್ರವಾಗಿದ್ದಾನೆ, ಅಮ್ಮಾ! ನಾನು ಅವನನ್ನು ಕಪಾಟಿನಲ್ಲಿ ಕೂತುಕೊಳ್ಳಿಸಿ ಬೀಗಹಾಕಿಬಿಟ್ಟಿದ್ದೇನೆ."

o o o o o o

ದುರದೃಷ್ಟ!

ವಿಶ್ವನಾಥರಾಯನು ಸಕುಟುಂಬನಾಗಿ 'ಟೊಕಿ'ಗೆ ಹೋಗಿದ್ದನು. ಪ್ರದರ್ಶನ ಮುಗಿಯುವಾಗ ಒಂಭತ್ತು ಘಂಟೆ ರಾತ್ರಿಯಾಗಿತ್ತು. ಸುತ್ತಲೂ

ಕಗ್ಗತ್ತಲು; ಸಾಲದುದಕ್ಕೆ ಮಳೆಯೂ ಸುರಿಯುತ್ತಿತ್ತು. ಹೆಂಡತಿಯು, "ಒಂದು ಜಟಕಾ ಗಾಡಿಯನ್ನಾದರೂ ಮಾಡಬಾರದೇ? ಎರಡು ಮೈಲು ನಡೆದುಕೊಂಡು ನಾವು ಮನೆಯನ್ನು ಸೇರಿದಂತೆಯೇ ಇದೆ ಈಹೊತ್ತು!" ಎಂದಳು.

ಮುಂದೆ ಒಂದು ಜಟಕಾ ಗಾಡಿಯು ಕಾಣಿಸಿಕೊಂಡಿತು. ವಿಶ್ವನಾಥ ರಾಯನು ಅದರ ಬಳಿಗೆ ಹೋಗಿ, ಗಾಡಿಯವನನ್ನು ಕರೆದು, "ಕಂಕನಾಡಿಗೆ ಹೋಗಲಿಕ್ಕೆ ಏನು ಕೊಡಬೇಕು?" ಎಂದು ಕೇಳಿದನು. ಗಾಡಿಯವನು, "ಒಂದು ರೂಪಾಯಿ ಕೊಡಬೇಕಯ್ಯ!" ಎಂದನು.

"ಚಿಂತೆಯಿಲ್ಲ. ಬಹಳ ಸಲೀಸಾಗಿ ಹೇಳಿರುವಿ. ಆದರೆ ನನ್ನದೊಂದು ಸೂಚನೆಯುಂಟು. ಕಾಲಾಣೆಯನ್ನು ಮೇಲೆ ಹಾರಿಸುವುದು. ನೀನು ಹೇಳಿದ ಮೈ ಮೇಲಾಗಿ ಅದು ಕೆಳಗೆ ಬಿದ್ದರೆ ನಾನು ನಿನಗೆ ಎರಡು ರೂಪಾಯಿ ಬಾಡಿಗೆ ಕೊಡುತ್ತೇನೆ. ನಾನು ಹೇಳಿದ ಮೈ ಮೇಲಾಗಿ ಬಿದ್ದರೆ ಏನೂ ಕೊಡುವುದಿಲ್ಲ. ಆಗಬಹುದೇ?"

"ಆಗಬಹುದು."

ಕಾಲಾಣೆ ಹಾರಿಸಿ ನೋಡಲು ಗಾಡಿಯವನೇ ಗೆದ್ದನು. ಒಡನೆ ವಿಶ್ವನಾಥರಾಯನು ಹೆಂಡತಿಯ ಕಡೆಗೆ ತಿರುಗಿ, "ನಮ್ಮ ದುರದೃಷ್ಟ, ಕಾಶೀ! ಇನ್ನು ನಾವು ನಡೆದುಕೊಂಡೇ ಮನೆಗೆ ಹೋಗಬೇಕಾಗಿದೆ!" ಎಂದನು.

೦ ೦ ೦ ೦ ೦ ೪

ವಿನೋದ ವಿಹಾರ

ಒಬ್ಬ ವಿಲಾಸಿ ತರುಣನು ಕಿಸೆತುಂಬ ಹಣದ ನೋಟುಗಳನ್ನು ಇರಿಸಿಕೊಂಡು ರೈಲುಬಂಡಿಯಲ್ಲಿ ಮೊದಲನೆಯ ತರಗತಿಯಲ್ಲಿ ಒಬ್ಬಂಟಿಗನಾಗಿ ಪ್ರಯಾಣಮಾಡುತ್ತಿದ್ದನು.

ನಿಶ್ಚಿಂತನಾಗಿ ಸಿಗರೇಟನ್ನು ಸೇದುತ್ತಾ ನಿರುದ್ದೇಶದಿಂದ ಮುಂದೆ ನೋಡುತ್ತಿದ್ದಂತೆಯೇ ಅವನಿಗೆ ಅಪಾಯದ ಸರಪಣಿಯು ಕಣ್ಣಿಗೆ ಬಿತ್ತು. ಅದರ ಅಡಿಯಲ್ಲಿ, 'ಅಪಾಯ ಬಂದಾಗ ಈ ಸರಪಣಿಯನ್ನು ಎಳೆದರೆ ಬಂಡಿ ನಿಲ್ಲುವುದು. ನಿಷ್ಕಾರಣವಾಗಿ ಸರಪಣಿ ಎಳೆದರೆ ಐವತ್ತು

ರೂಪಾಯಿ ದಂಡ ತೆರಬೇಕಾಗುವುದು,' ಎಂದು ಎರಡು ಮೂರು ಭಾಷೆಗಳಲ್ಲಿ ಬರೆಯಲ್ಪಟ್ಟಿತ್ತು.

ಇದನ್ನು ನೋಡುತ್ತಿದ್ದಂತೆಯೇ ಅವನಿಗೆ ಸ್ವಲ್ಪ ತಮಾಷೆಮಾಡಬೇಕೆನಿಸಿತು. ಒಡನೆಯೇ ಎದ್ದು ಆ ಸರಪಣಿಯನ್ನು ಹಿಡಿದು ಎಳೆದನು. ಬಂಡಿಯು ಕೂಡಲೇ ಕರ್ಕಶವಾದ ಶಬ್ದದೊಂದಿಗೆ ಸ್ತಬ್ಧವಾಯಿತು.

ಪ್ರಯಾಣಿಕರೆಲ್ಲರೂ ಕುತೂಹಲದಿಂದ ತಲೆಗಳನ್ನು ಹೊರಗೆ ಹಾಕಿ ಇಣುಕುತ್ತಿದ್ದಂತೆಯೆ ಗಾರ್ಡನು ಯಾವ ಬಂಡಿಯವರು ಅಪಾಯದಲ್ಲಿರುವರೆಂಬುದನ್ನು ಕಂಡುಹಿಡಿಯುವುದಕ್ಕಾಗಿ ಬಂಡಿಯಿಂದ ಬಂಡಿಗೆ ಓಡಾಡತೊಡಗಿದನು.

ಗಾರ್ಡನು ತರುಣನಿದ್ದ ಬಂಡಿಯ ಬಳಿಗೆ ಬಂದು, "ಸರಪಣಿಯನ್ನು ಈ ಬಂಡಿಯೊಳಗಿನವರು ಎಳೆದುದೇ?" ಎಂದು ಕೇಳುತ್ತಲೇ ತರುಣನು, "ಹೌದು," ಎಂದು ಬಹು ಸಮಾಧಾನದಿಂದ ಉತ್ತರಕೊಟ್ಟನು.

ಗಾರ್ಡನು, "ಯಾರು?" ಎನ್ನುತ್ತಲೇ ತರುಣನು, "ನಾನು," ಎಂದನು.

ಗಾರ್ಡನು, "ಯಾಕೆ? ಏನಾಗಿದೆ?" ಎಂದು ಕೇಳಿದನು.

ತರುಣನು, "ಏನೂ ಆಗಿಲ್ಲ. ಸರಪಣಿಯನ್ನು ಪರೀಕ್ಷಿಸುವುದಕ್ಕಷ್ಟೆ ಎಳೆದೆನು," ಎಂದನು.

ಗಾರ್ಡನು, "ಸುಮ್ಮನೆ ಕಾರಣವಿಲ್ಲದೆ ಬಂಡಿಯನ್ನು ನಿಲ್ಲಿಸಿದರೆ ಐವತ್ತು ರೂಪಾಯಿ ದಂಡ ಕೊಡಬೇಕಾಗುವುದೆಂದು ನಿಮಗೆ ಗೊತ್ತಿಲ್ಲವೇ?" ಎಂದು ಕೇಳಿದನು.

ತರುಣನು, "ಅದೆಲ್ಲಾ ಗೊತ್ತಿದೆ. ರೂಪಾಯಿ ಈಗಲೇ ತೆಗೆದುಕೊ," ಎಂದು ನೋಟುಗಳನ್ನು ತೆಗೆದು ಕೊಡಹೋದನು.

ಗಾರ್ಡನು, "ಮುಂದಿನ ಸ್ಟೇಶನಿನಲ್ಲಿ ಮಾತಾಡಲು ಸಿಕ್ಕಿರಿ. ನಿಮ್ಮ ಹೆಸರು ವಿಳಾಸಗಳನ್ನೆಲ್ಲಾ ಅಲ್ಲಿ ತಿಳಿಸಿರಿ, ಹಣವನ್ನು ಮುಂದೆ ಕಂಪೆನಿಯವರಿಗೇ ಪಾವತಿಮಾಡಬೇಕಾಗಿದೆ," ಎಂದು ಹೇಳಿ, ಬಂಡಿಯನ್ನು ಬಿಡಲು ಪೀಪಿಯನ್ನು ಊದಿ, ತನ್ನ ಬಂಡಿಗೆ ಹೋದನು. ತರುಣನು ಆಮೇಲೆ ತಿರುಗಿ ಎರಡು ಬಾರಿ ಅದೇ ರೀತಿಯಲ್ಲಿ ಮಾಡಿ ಬಂಡಿಯನ್ನು ನಿಲ್ಲಿಸಿದನು. ಇದರಿಂದ ರೇಗಿದ ಗಾರ್ಡನು, ಇನ್ನುಮುಂದೆ ಆತನು

ಸರಪಣಿಯನ್ನು ಎಳೆದರೆ ಬಂಡಿಯು ನಿಲ್ಲಿಸಲ್ಪಡಲಿಕ್ಕಿಲ್ಲವೆಂದು ಎಚ್ಚರಿಸಿದನು.

ಬಂಡಿಯು ಮೂರನೆಯ ಬಾರಿ ಮುಂದೆ ಹೋಗುತ್ತಿರುವಾಗ ತರುಣನಿಗೆ, ಗಾರ್ಡನು ಬಂಡಿಯನ್ನು ನಿಲ್ಲಿಸುವುದಿಲ್ಲವೆನ್ನಲು ಆತನಿಗೆ ಹಕ್ಕಿಲ್ಲವೆಂದು ಎನಿಸಿತು. ಆದುದರಿಂದ ಆತನೊಡನೆ ಆ ವಿಷಯ ಚರ್ಚೆಮಾಡಬೇಕೆಂದು ತೋರಿ ಅವನು ತಿರುಗಿ ಸರಪಣಿಯನ್ನು ಎಳೆದನು. ಆದರೆ ಅವನು ನಾಲ್ಕು ಬಾರಿ ಹಾಗೆ ಮಾಡಿದರೂ ಬಂಡಿಯು ನಿಲ್ಲಲೇ ಇಲ್ಲ.

ಸ್ವಲ್ಪ ಸಮಯದಲ್ಲೇ ಒಂದು ಸ್ಟೇಶನು ಬರಲು, ಬಂಡಿಯು ನಿಂತಿತು. ಅಲ್ಲಿ ಗಾರ್ಡನು ಸ್ಟೇಶನ್ ಮಾಸ್ತರನೊಡನೆ ಬಂದು ತರುಣನ ತಪ್ಪನ್ನು ಕುರಿತು ಅವಶ್ಯವಾದ ವಿವರವನ್ನು ಪಡೆದು ಹೋದನು.

ತರುಣನು ಊರಿಗೆ ಹೋಗಿ ಮುಟ್ಟಿದ ಮೇಲೆ ಯುಕ್ತಕಾಲದಲ್ಲೇ ಅವನಿಗೆ ಕಂಪೆನಿಯಿಂದ, ಅವನು ಮೂರು ಬಾರಿ ಅನಾವಶ್ಯಕವಾಗಿ ಸರಪಣಿ ಎಳೆದುದಕ್ಕಾಗಿ ನೂರೈವತ್ತು ರೂಪಾಯಿ ದಂಡ ತೆರಬೇಕೆಂದು ಪತ್ರಬಂತು.

ತರುಣನು ಮಾತ್ರ ಅದಕ್ಕೆ ಉತ್ತರವಾಗಿ, ತನಗೆ ಅವಶ್ಯಬಿದ್ದಾಗ ಗಾರ್ಡನು ನಾಲ್ಕುಬಾರಿ ಬಂಡಿಯನ್ನು ನಿಲ್ಲಿಸದುದಕ್ಕಾಗಿ ತನಗೆ ಕಂಪೆನಿಯು ಕೊಡಬೇಕಾಗಿದ್ದ ಇನ್ನೂರು ರೂಪಾಯಿ ಪರಿಹಾರದ್ರವ್ಯದಿಂದ ಅದಕ್ಕೆ ಸಲ್ಲತಕ್ಕ ರೂಪಾಯಿಯನ್ನು ಕಳೆದು ಉಳಿದುದನ್ನು ತನಗೆ ಕಳುಹಿಸಬೇಕಾಗಿ ತಿರುಗಿ ಬರೆದನು.

o o o o o o

ಯಶಸ್ವಿಯಾದ ಸ್ಪರ್ಧೆ

ಬಲಪುರದ ರಾಜನು ಅಬಲಪುರದ ರಾಜನಿಗೆ ಒಂದು ಯುದ್ಧದಲ್ಲಿ ತನ್ನ ಸೈನ್ಯವನ್ನು ಬೆಂಬಲಕ್ಕೆ ಕೊಟ್ಟನು. ಅಬಲಪುರದ ರಾಜನು ಯುದ್ಧದಲ್ಲಿ ಸೋತು ಬಹಳ ಕಷ್ಟನಷ್ಟ ಪಟ್ಟು ಬಲಪುರಕ್ಕೆ ಓಡಿಬಂದು ತಲೆ ಉಳಿಸಿಕೊಂಡು, "ಮಹಾರಾಜ! ತಮ್ಮ ಸೈನಿಕರು ಓಟದಲ್ಲಿ ಸ್ಪರ್ಧಿಗಳಾದಂತೆ ಕಾಣುವುದು!" ಎಂದು ವಿನೋದವಾಗಿ ಎಂದನು.

ಬಲಪುರದ ರಾಜನು, ಮುಗುಳುನಗುತ್ತಾ, "ಆ ಸ್ಪರ್ಧೆಯಲ್ಲಿ ನೀವೇ ಗೆದ್ದಂತೆ ಕಾಣುವುದು!" ಎಂದನು.

o o o o o o

ಪ್ರಥಮ ಚುಂಬನಂ ದಂತಭಂಜನಂ!

ರಾಮಚಂದ್ರರಾಯರು ಆದಾಗಲೇ ವಕಾಲತ್ತಿನ ಸನ್ನದು ಪಡೆದು ಬಂದಿದ್ದರು. ಕೋರ್ಟ್ ರೋಡಿನಲ್ಲಿ ಒಂದು ಪ್ರಶಸ್ತವಾದ ಕಟ್ಟೋಣದಲ್ಲಿ ಮುಹೂರ್ತಮಾಡಿದ್ದರು. ತನ್ನ ವ್ಯವಸಾಯವನ್ನು ಆಧುನಿಕ ರೀತಿಯಲ್ಲಿ ಆರಂಭಿಸಲು ಟೊಂಕ ಕಟ್ಟಿದ್ದರು.

ರಾಯರೇ 'ಟಿಪ್-ಟೊಪ್'. ಅವರ 'ಒಫಿಸ್' ಕೂಡ 'ಟಿಪ್ ಟೊಪ್' ಆಗಿಯೇ ಸಜ್ಜಾಗಿತ್ತು; ಸುತ್ತಲೂ ಗೋಡೆಗೆ ಆತುಕೊಂಡು ಕನ್ನಡಿಯ ಕಪಾಟುಗಳು. ಕಪಾಟು ತುಂಬ ಚಿನ್ನದ ಅಕ್ಷರಗಳಿಂದೊಪ್ಪುವ ದಪ್ಪದಪ್ಪ ಪುಸ್ತಕಗಳ ಸಾಲುಗಳು. ಕೋಣೆ ತುಂಬ ಒಪ್ಪವಾಗಿರಿಸಿದ ಮೇಜುಕುರ್ಚಿಗಳು. ಮೇಜೊಂದರ ಮೇಲೆ ಒಂದು ಹೊಚ್ಚ ಹೊಸ 'ಟಾಯ್ಪ್‌ರಾಯ್ಟರ್'; ಅದರ ಬಳಿ ಒಬ್ಬ ಅಚ್ಚುಕಟ್ಟಾದ 'ಟಾಯ್ಪಿಸ್ಟ್'. ಇನ್ನೊಂದು ದೊಡ್ಡ ಬೀರುವಿನ ಮೇಲೆ 'ರೆಕೊರ್ಡ್'ಗಳ ಕಟ್ಟುಗಳು; ಅದರ ಬಲಗಡೆಯಲ್ಲಿ ಲೇಖನಸಾಮಗ್ರಿ, 'ಕೊಲ್ ಬೆಲ್ಲು'; ಎಡಗಡೆಯಲ್ಲಿ 'ಟೆಲಿಫೋನ್ ರಿಸೀವರು'. ಬೀರುವಿನ ಹಿಂದೆ ಒಂದು ತಿರುಗಣೆ ಕುರ್ಚಿ. ಮೇಲೆ ಎಡೆಬಿಡದೆ ತಿರುಗುತ್ತಿದ್ದ 'ಫೆನು'.

ಪ್ರಥಮ 'ಕೇಸಿ'ಗಾಗಿ ಕಾದುಕುಳಿತ ದಿನ. ತಿರುಗಣೆ ಕುರ್ಚಿಯ ಮೇಲೆ ರಾಯರ ಠೀವಿಯುಕ್ತ ಮೂರ್ತಿ. ಆಸೆ ಕೊನರಿಸಿ, ಕಿವಿ ನಿಮಿರಿಸಿ ಕುಳಿತಿತ್ತು. ಒಡನೆ ಯಾರೋ ಮೆಟ್ಟಲು ಹತ್ತಿಕೊಂಡು ಬರುವ ಸಪ್ಪಳವಾಯಿತು. ಮಿಂಚಿನ ವೇಗದಲ್ಲಿ ರಾಯರ ಕೈಯೊಳಗಿನ ದಿನಪತ್ರಿಕೆ ಬೀರುವಿನ ಅಡಿಗೆ ಅಡಗಿತು. ಟೆಲಿಫೋನ್ ರಿಸೀವರಿಗೆ ಕೈ ನೆಗೆಯಿತು. ರಿಸೀವರು ಕಿವಿಬಾಯಿಗೆ ಚಿಗಿಯಿತು. ಅವರ ಗಂಭೀರವಾದ ವಾಕ್ಸರಣಿಯು ಎತ್ತಿದ ದನಿಯಲ್ಲಿ ಕೇಳಿಸತೊಡಗಿತು.

"ಆಗಲಿ, ಮಿಸ್ಟರ್ ಶ್ರೀಪಾದ ರಾಯರೆ, ಆ ಸಂಸ್ಥೆಯ ಕೇಸನ್ನು ನಿಮ್ಮ ದಾಕ್ಷಿಣ್ಯಕ್ಕಾಗಿ ವಹಿಸಿಕೊಳ್ಳುತ್ತೇನೆ. ಬೆಳಿಗ್ಗೆ ದಿವಾನ್ ಬಹ

ದ್ದೂರ್ ನಾರಾಯಣರಾಯರು ಬಂದಿದ್ದರು. ಅವರ ಮಾನನಷ್ಟದ ದಾವೆಯನ್ನು ನಾನೇ ವ್ಯವಹರಿಸಬೇಕೆಂದು ಬಹಳ ಒತ್ತಾಯಪಡಿಸಿದರು. ಇಲ್ಲಿ ಕೇಸುಗಳ ದಾಳಿಯಿಂದ ಕ್ಷಣವಾದರೂ ಬಿಡುವಿಲ್ಲ. ನಾನು ಬಿಲ್‌ಕುಲ್ ಒಪ್ಪಲಿಲ್ಲ. ಅತ್ತ ಆ ಮಹಾತ್ಮಾ ಬೆಂಕಿನ ಕೇಸು; ಇತ್ತ ಈ ಹುತಾತ್ಮಾ ಇನ್ಶ್ಯೂರೆನ್ಸ್ ಕಂಪೆನಿಯ ಕೇಸು. ಇವುಗಳ ಎಡೆಯಲ್ಲಿ ಹೇಗಾದರೂ ಮಾಡಿ ನಿಮ್ಮ ಕೇಸಿಗೆ ಅವಕಾಶಮಾಡಿಕೊಳ್ಳುತ್ತೇನೆ...... ಸರಿ, ಸರಿ........ ನಮಸ್ಕಾರ!"

ಹೊರಗೆ ತಡೆದ ಆಸಾಮಿ ಅನುಮಾನಮಾಡುತ್ತ ಒಳಗೆ ಕಾಲಿಟ್ಟನು. ಅವನನ್ನು ಬೆಪ್ಪುಗೊಳಿಸುವುದರಲ್ಲಿ ಯಶಸ್ವಿಯಾದೆನೆಂಬ ಸಮಾಧಾನದಿಂದ ರಾಯರು ರಿಸೀವರನ್ನು ಹೊಂದಿಸಿಡುತ್ತ ಅವನ ಕಡೆಗೆ ಮುಖ ತಿರುಗಿಸಿದರು.

ಬಂದವನು, "ಕ್ಷಮಿಸಿ, ಸ್ವಾಮೀ! ತಮ್ಮ ಫೋನಿಗೆ ಕನೆಕ್ಷನ್ ಕೊಡಲು ಕಂಪೆನಿಯವರು ನನ್ನನ್ನು ಕಳುಹಿಸಿದ್ದಾರೆ," ಎಂದನು.

ಹೌಹಾರಿ ಸಿಡಿದೆದ್ದು ಬಿದ್ದ ರಾಯರನ್ನು ಕೈಹಿಡಿದೆಬ್ಬಿಸುವುದೇ ಅವನ ಮೊದಲ ಕೆಲಸವಾಯಿತು!

o o o o o o

ಅಷ್ಟು ತುಚ್ಛ

ಇಬ್ಬರು ಹೆಂಗಸರು ಚಲಚ್ಚಿತ್ರಕಾರರ ವಠಾರವೊಂದರ ಹತ್ತಿರದ ಒಂದು ಹೊಲವನ್ನು ದಾಟುವುದರಲ್ಲಿದ್ದರು. ಅಷ್ಟರಲ್ಲಿ ಒಬ್ಬನು ಕೈಯನ್ನು ಬೀಸುತ್ತಾ ಅವರ ಬಳಿಗೆ ಓಡಿಬಂದನು.

"ಆಚೆಗೆ ಹೋಗಬೇಡಿರಮ್ಮಾ! ಅಲ್ಲಿ ಒಂದು ಚಲಚ್ಚಿತ್ರವನ್ನು ತಯಾರಿಸುತ್ತಿರುವರು. ನಿಮ್ಮಿಂದ ಅದು ಹಾಳಾಗಿಹೋದೀತು!" ಎಂದು ಬಂದವನು ಅವರಿಗೆ ಬಿನ್ನೈಸಿಕೊಂಡನು.

ಅವರಲ್ಲಿ ಒಬ್ಬಳು, ತುಚ್ಛೀಕಾರವನ್ನು ವ್ಯಕ್ತಪಡಿಸುತ್ತಾ, "ನಾನು ಕಳೆದವಾರ ನೋಡಿದ ಚಿತ್ರವೇ ಇದಾಗಿದ್ದ ಪಕ್ಷದಲ್ಲಿ ಅದು ಹಾಳಾಗಲು ತಕ್ಕುದಾಗಿಯೇ ಇದೆ!" ಎಂದಳು.

o o o o o o

ಆದರ್ಶ ಪುರಸ್ಕಾರ!

'ಅಭ್ಯುದಯ' ಪತ್ರಿಕೆಯು, 'ನಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದ ಪ್ರತಿಯೊಂದು ಲೇಖನಕ್ಕೂ ಪುರಸ್ಕಾರ ಕೊಡಲಾಗುವುದು,' ಎಂದು ವ್ಯಕ್ತಪಡಿಸಿತ್ತು. ಚಂದ್ರಶೇಖರ ರಾಯನು ಬಹಳ ಸ್ಫೂರ್ತಿಯಿಂದ, ಬಹಳ ಪ್ರಯಾಸದಿಂದ ಒಂದು ಲೇಖನವನ್ನು ಬರೆದು, 'ಅಭ್ಯುದಯ'ಕ್ಕೆ ಕಳುಹಿಸಿಕೊಟ್ಟನು.

ಮರುಟಪ್ಪಾಲಿಗೆ 'ಅಭ್ಯುದಯ' ಸಂಪಾದಕರು ಆ ಲೇಖನವು ಅಂಗೀಕರಿಸಲ್ಪಟ್ಟಿರುವುದೆಂದೂ, ಅದು ಕ್ರಮೇಣ ಪ್ರಕಟಿಸಲಾಗುವುದೆಂದೂ, ಅವನು ಇನ್ನು ಮುಂದೆಯೂ ಅದೇ ಪ್ರಕಾರ ಲೇಖನಗಳನ್ನು ಕಳುಹಿಸುತ್ತಿರಬೇಕೆಂದೂ ವಿಜ್ಞಾಪಿಸಿಕೊಂಡು ಅವನಿಗೆ ಒಂದು ಪತ್ರ ಬರೆದರು.

ಮುಂದಿನ ತಿಂಗಳಲ್ಲೇ ಆ ಲೇಖನವು ಪ್ರಕಟವಾದುದನ್ನು ಕಂಡು, ಚಂದ್ರಶೇಖರ ರಾಯನು ಇನ್ನೂ ಎರಡು ಮೂರು ಲೇಖನಗಳನ್ನು ಬಹಳ ಪರಿಶ್ರಮದಿಂದ ಬರೆದು 'ಅಭ್ಯುದಯ'ಕ್ಕೆ ಕಳುಹಿಸಿಕೊಟ್ಟನು. ಅವೂ ಅಂಗೀಕೃತವಾಗಿ ಯಥಾಕಾಲದಲ್ಲಿ ಪ್ರಕಟವಾದುವು.

ಮೂರು ನಾಲ್ಕು ತಿಂಗಳು ಕಳೆದರೂ ಸಂಪಾದಕರು ಪ್ರಕಟಿಸಿರುವಂತೆ ಪುರಸ್ಕಾರವು ಮಾತ್ರ ತನಗೆ ಇನ್ನೂ ಬಾರದುದನ್ನು ನೋಡಿ, ಚಂದ್ರಶೇಖರ ರಾಯನು ಅವರಿಗೆ ಮೆಲ್ಲನೆ ಒಂದು ವಿನಂತಿಪತ್ರವನ್ನು ಬರೆದುಕೊಂಡನು.

ಅದಕ್ಕೆ ಉತ್ತರವಾಗಿ ಸಂಪಾದಕರು, ತಮ್ಮ ಪ್ರಕಟನೆಯಂತೆ ತಾವು ಅವನ ಪುರಸ್ಕಾರವನ್ನು ಆ ಮೊದಲೇ, ಅವನ ಲೇಖನವು ಪ್ರಕಟವಾದ 'ಅಭ್ಯುದಯ'ದ ಒಂದೊಂದು ಪ್ರತಿಯ ರೂಪವಾಗಿ, ಕಳುಹಿಸಿಕೊಟ್ಟಿರುವೆವೆಂದೂ, ಅವನಿಂದ ಇನ್ನೂ ಲೇಖನಗಳನ್ನು ನಿರೀಕ್ಷಿಸುತ್ತಿರುವೆವೆಂದೂ ಮರುಟಪ್ಪಾಲಿಗೇ ಬರೆದರು.

o o o o o o

ಅನಿರೀಕ್ಷಿತ ಅವಘಡ

ರೈಲು ಬಂಡಿಯು ಅತ್ಯಂತ ವೇಗದಿಂದ ಓಡುತ್ತಿತ್ತು. ರಾಮರಾಯನು ಒಂದು ಮೂಲೆಯಲ್ಲಿ ಕುಳಿತಲ್ಲಿಯೆ ತೂಕಡಿಸುತ್ತಿದ್ದನು.

ಒಬ್ಬ ಸಹಪ್ರಯಾಣಿಕನು ಅವನನ್ನು ಥಕ್ಕನೆ ಎಬ್ಬಿಸಿ, "ನಿಮ್ಮ ಮುಂದೆ ಕೂತಿದ್ದವರು ನಿಮ್ಮ ಹೆಂಡತಿಯೇ?" ಎಂದು ಕೇಳಿದನು.

ರಾಮರಾಯನು, ಅತ್ತಿತ್ತ ನೋಡುತ್ತಾ, ಗಲಿಬಿಲಿಯಿಂದ, "ಹೌದು, ಹೌದು! ಏನಾಯಿತು, ಅವಳೆಲ್ಲಿ?" ಎಂದು ಕೇಳಿದನು.

ಪ್ರಯಾಣಿಕನು, "ಆಗುವುದೇನಿದೆ? ಅವರು ಈಗತಾನೇ ಬಂಡಿಯಿಂದ ಕೆಳಗೆ ಬಿದ್ದರು!" ಎಂದನು.

ರಾಮರಾಯನು, "ರಾಮ, ರಾಮ! ಅಲ್ಲಿ ನಿಂತು ಮಂಕನಂತೆ ಮೇಲೆ ಕೆಳಗೆ ನೋಡುವಿಯೇನನ್ನು? ಆ ಅಪಾಯಸೂಚಕ ಸರಪಣಿಯನ್ನು ಹಿಡಿದೆಳೆ, ಮಹಾರಾಯಾ! ಟಿಕೇಟುಗಳು ಅವಳ ಬಳಿಯಲ್ಲೇ ಇವೆ!" ಎಂದು ಒದರಿದನು.

o o o o o o

ಪ್ರತೀಕಾರ

ವಿಪರೀತದೊಡ್ಡ ಕಾಲುಗಳುಳ್ಳ ಒಬ್ಬ ಸಾಹೇಬನು ಬೂಟುಗಳನ್ನು ಕೊಂಡುಕೊಳ್ಳುವುದಕ್ಕಾಗಿ ಒಂದು ಅಂಗಡಿಗೆ ಹೋದನು.

ಅಂಗಡಿಗಾರನು ತನ್ನ ಬಳಿಯಲ್ಲಿದ್ದ ಎಲ್ಲಾ ಗಾತ್ರಗಳ ಬೂಟುಗಳನ್ನು ಅವನ ಕಾಲಿಗೆ ಹಾಕಲು ನೋಡಿದರೂ ಒಂದರಲ್ಲೂ ಅವನ ಕಾಲು ಹೋಗಲಿಲ್ಲ. ಸಾಹೇಬನು ಕೆಮ್ಮಿನ ಬಾಧೆಯಿಂದ ನರಳುತ್ತಿದ್ದು ಆಗಿಂದಾಗ ಕೆಮ್ಮುತ್ತಾ ಇದ್ದನು.

ಅಂಗಡಿಗಾರನು, ಸೈರಿಸಲಾರದೆ, "ಎಂತಹ ಕೆಟ್ಟ ಕೆಮ್ಮು!" ಎಂದು ಗುಣುಗಿದನು.

ಸಾಹೇಬನು, "ಹೌದು, ಸ್ವಾಮೀ! ಬಹಳ ಕೆಟ್ಟ ಕೆಮ್ಮು. ವೈದ್ಯರು ಈಗಾಗಲೇ ನನ್ನ ಒಂದು ಕಾಲು ಗೋರಿಯಲ್ಲಿದೆ ಎಂದಿರುವರು," ಎಂದನು.

ಅಂಗಡಿಗಾರನು, "ಸರಿ, ಸರಿ. ಆದರೆ ನಿಮ್ಮ ಇನ್ನೊಂದು ಕಾಲು ಎಂದೆಂದಿಗೂ ಗೋರಿಯೊಳಗೆ ಹೋಗಲಿಕ್ಕಿಲ್ಲ. ಅಷ್ಟು ದೊಡ್ಡದಿವೆ ಈ ಕಾಲುಗಳು!" ಎಂದು ವ್ಯಕ್ತಪಡಿಸಿದನು.

o o o o o o

ಕ್ಷಿಪ್ರತೆಯ ಉಚ್ಚ ನಿದರ್ಶನ!

ಇಂಗ್ಲಿಷ್ ಮತ್ತು ಅಮೇರಿಕನ್ ವಿಮಾ ಕಂಪೆನಿಗಳೆರಡರ ಏಜಂಟರಿಬ್ಬರು ತಂತಮ್ಮ ಪ್ರತಿದ್ವಂದ್ವಿ ವಿಧಾನಗಳ ಕುರಿತು ಮಾತಾಡಿಕೊಳ್ಳುತ್ತಿದ್ದರು.

ಆಂಗ್ಲೇಯನು ತನ್ನ ಕಂಪೆನಿಯ ಕ್ಷಿಪ್ರ ಹಣ ಸಲ್ಲಿಸುವ ಸಂದಾಯ ಕ್ರಮ, ತ್ರಾಸ ಕೊಡದ ವ್ಯವಹಾರ ರೀತಿ, ವ್ಯರ್ಥಾಲಾಪ ಮಾಡದ ಕಾರ್ಯ ವಿಧಾನ, ಸಂದಾಯದಿಂದ ತಪ್ಪಿಸಿಕೊಳ್ಳದಂತಹ ವ್ಯಾಪಾರ ನಿಯಮ ಮುಂತಾದುವುಗಳನ್ನು ಕುರಿತು ಕೊಚ್ಚುತ್ತಿದ್ದನು.

"ಒಬ್ಬ ವಿಮಾದಾರನು ಈದಿನ ರಾತ್ರಿ ಸತ್ತರೆ ಅವನ ವಿಧವೆಯು ನಾಳೆ ಬೆಳಗ್ಗಿನ ಮೊದಲ ಟಪ್ಪಾಲಿಗೇ ತನಗೆ ಸಲ್ಲಬೇಕಾದ ವಿಮೆಯ ಹಣವನ್ನು ಪಡೆಯಬಲ್ಲಳು!" ಅವನು ಹೆಮ್ಮೆಯಿಂದ ಎಂದನು.

"ಅದೇನು ಮಹಾ?'' ಅಮೇರಿಕನ್ನನೆಂದನು. "ಅದು ಕ್ಷಿಪ್ರ ಸಂದಾಯವೆಂದಿಯಾ?—ನಮ್ಮ ಕಂಪೆನಿಯ ಕಾರ್ಯಾಲಯವು ಅರುವತ್ತೊಂಭತ್ತು ಮಾಳಿಗೆಗಳ ಕಟ್ಟಡವೊಂದರ ಆರನೇ ಮಾಳಿಗೆಯಲ್ಲಿದೆ. ನಮ್ಮ ಒಬ್ಬ ಗಿರಾಕಿಯು ನಾಲ್ವತ್ತೊಂಭತ್ತನೆಯ ಮಾಳಿಗೆಯಲ್ಲಿ ವಾಸ ಮಾಡಿಕೊಂಡಿದ್ದನು. ಅವನು ಒಂದು ದಿನ ತನ್ನ ಕಿಟಿಕಿಯಿಂದ ಮಾಲಿಕೆಳಕ್ಕೆ ಬಿದ್ದನು. ನಮ್ಮ ಮಾಳಿಗೆಯನ್ನು ಅವನು ಹಾದುಹೋಗುತ್ತಿರುವಾಗಲೇ ನಾವು ಅವನ ಚೆಕ್ಕನ್ನು ಅವನ ಕೈಗೆ ಕೊಟ್ಟೆವು! ಇದಕ್ಕೇನೆನ್ನುವಿ?"

o o o o o o

ನಷ್ಟದಲ್ಲಿ ಲಾಭ!

"ಅಬ್ಬಬ್ಬ ಗ್ರಹಚಾರವೇ!—ಇದೇನು ಮಾಡಿದೆ ನಾನು?" ರೈಲ್ವೇ ಪ್ರಯಾಣಿಕನೊಬ್ಬನು ತನ್ನ ಸೀಟಿನಲ್ಲಿ ಧೃತಿಗೆಟ್ಟು ಮುಗ್ಗರಿಸುತ್ತ ಎಂದನು.

"ಏನು, ಏನಾಯಿತಯ್ಯ?" ಅವನ ಸಹಪ್ರಯಾಣಿಕನು ಗಾಬರಿಪಡುತ್ತ ಕೇಳಿದನು.

"ನನ್ನ ಸಾಮಾನು ಹುಡುಕಾಡುವ ಅವಸರದಲ್ಲಿ ನಾನು ಅಪಾಯ ಸೂಚಕ ಸರಪಣಿಯನ್ನು ಕೈತಪ್ಪಿ ಎಳೆದುಬಿಟ್ಟೆ!" ಮೊದಲನೆಯವನು

ಎಂದನು. "ಈಗ ನಾನೇನು ಮಾಡಲಿ?—ನನಗೆ ಸುಮ್ಮನೆ ಐವತ್ತು ರೂಪಾಯಿ ದಂಡವಾಗುವುದಲ್ಲ!"

ಸಹಪ್ರಯಾಣಿಕನು ಸ್ವಲ್ಪ ಯೋಚನಾಪರನಾದನು; ಒಡನೆ ಆಶ್ವಾಸನೆಯಿತ್ತನು:

"ಹೆದರಬೇಡಿರಯ್ಯ, ಹೆದರಬೇಡಿ. ನನಗೆ ಬರೇ ಇಪ್ಪತ್ತೈದು ರೂಪಾಯಿ ಕೊಡಿ,-ನಾನು ಅಪಸ್ಮಾರ ಬಡಿದವನಂತೆ ನಟನೆಮಾಡುತ್ತೇನೆ."

o o o o o o

ಸದುದ್ದೇಶ

ಒಮ್ಮೆ ಒಂದು ಪರ್ವತಪ್ರಾಂತ್ಯದಲ್ಲಿ ಒಂದು ಶೋಚನೀಯ ಅವಘಡ ವಾಯಿತು: ಒಬ್ಬ ಬೇಸಾಯಗಾರನ ಅತ್ತೆಯನ್ನು ಅವನ ಹೇಸರಕತ್ತೆಯು ಒದ್ದು ಕೊಂದುಬಿಟ್ಟಿತು. ಅವಳ ಸ್ಮಶಾನಯಾತ್ರೆಯ ಸಮಯದಲ್ಲಿ ಜನರ ದೊಡ್ಡ ಗುಂಪೇ ಕೂಡಿತು. ಅವರಲ್ಲಿ ಅಧಿಕಾಂಶದವರು ಗಂಡಸರಾಗಿದ್ದರು.

ಇದನ್ನು ನೋಡಿ ಪಾದ್ರಿಯು ತನ್ನ ಸದಭಿಪ್ರಾಯವನ್ನು ಸೂಚಿಸಿದನು: "ಈ ಮುದುಕಿಯು ಬಹಳ ಜನಪ್ರಿಯಳಾಗಿದ್ದಳೆಂದು ಕಾಣುತ್ತದೆ. ಇಷ್ಟು ಜನರು ತಂತಮ್ಮ ಕೆಲಸಕಾರ್ಯ ಬಿಟ್ಟು ಅವಳ ಸ್ಮಶಾನಯಾತ್ರೆಗೆ ಬಂದುದೇ ಅದನ್ನು ಸಾರುತ್ತಿದೆ."

ಬೆರಗಾದ ಬೇಸಾಯಗಾರನು ಒಡನೆ ಉತ್ತರಕೊಟ್ಟನು: "ಇವರು ಸ್ಮಶಾನಯಾತ್ರೆಗೆಂದು ಬಂದಿಲ್ಲ; ಈ ಹೇಸರಕತ್ತೆಯನ್ನು ಕೊಂಡುಕೊಳ್ಳುವುದಕ್ಕೆಂದು ಬಂದಿದ್ದಾರೆ."

o o o o o o

ಸಹ ಅಪರಾಧಿಯೇ?

ತಂಟೆಖೋರನಾದ ಪುಟ್ಟ ಗುಂಡನು ಏನೋ ಲೂಟಿಮಾಡಿದುದಕ್ಕಾಗಿ ಅವನ ತಾಯಿ ಸೀತಮ್ಮನು ಅವನನ್ನು ಹೊಡೆಯುವುದಕ್ಕೆ ಅಟ್ಟಿಕೊಂಡು ಬಂದಳು; ಗುಂಡನು ಸಟಸಟನೆ ಓಡಿ ಅಟ್ಟವನ್ನೇರಿ ಕುಳಿತುಕೊಂಡನು.

ಸ್ವಲ್ಪ ಹೊತ್ತಿನಲ್ಲೇ ಗಂಡನು ಮನೆಗೆ ಬರಲು, ಸೀತಮ್ಮನು ಮಗನ ಬಾಧೆಯನ್ನು ಸೈರಿಸಲಾಗುವುದಿಲ್ಲವೆಂದು ಅವನಲ್ಲಿ ದೂರಿಟ್ಟಳು.

ಆಗ ಅವನು ಮಗನನ್ನು ಹಿಡಿದು ತರುವುದಕ್ಕಾಗಿ ಅಟ್ಟವನ್ನು ಹತ್ತುತ್ತಿರಲು, ಗುಂಡನು ಅದನ್ನು ಕಂಡು ಕಾತರದಿಂದ ಕೇಳಿದನು: "ಅಪ್ಪಾ, ಅಮ್ಮನು ನಿನ್ನನ್ನೂ ಹಿಂಬಾಲಿಸಿಕೊಂಡು ಬಂದಿರುವಳೇ?"

o o o o o o

ಮುಂದಾಲೋಚನೆ

ಒಬ್ಬ ಲೋಭಿಯು ತನ್ನ ಒಬ್ಬಳೇ ಮಗಳನ್ನು ಮದುವೆಯಾಗುವ ಬಯಕೆಯಿಂದ ಬಂದ ಕನ್ಯಾರ್ಥಿಯೊಡನೆ, "ನಿನಗೆ ಆಸ್ತಿ ಎಷ್ಟಿರುವುದು?" ಎಂದು ಕೇಳಿದನು.

ಆಗ ಅವನು, "ಈಗ ಏನೊಂದಿಲ್ಲ. ಆದರೆ, ಇನ್ನು ಕೆಲವು ವರ್ಷ ಗಳಲ್ಲೇ ನನಗೆ ದೊಡ್ಡದೊಂದು ಆಸ್ತಿಯು ಸಿಕ್ಕಲಿರುವುದು," ಎಂದನು.

ಮದುವೆಯಂತೂ ಆಯಿತು; ಆಗ ಆ ಲೋಭಿಗೆ, ತನ್ನ ಅಳಿಯನಿಗೆ ಇನ್ನು ಕೆಲವು ವರ್ಷಗಳಲ್ಲೇ ದೊರೆಯಲಿದ್ದ ಆಸ್ತಿಯು ತನ್ನದೇ ಆಗಿದ್ದಿತೆಂದು ತಿಳಿದುಬಂತು!

o o o o o o

ಯೋಗ್ಯತೆಗೆ ತಕ್ಕ ಭಾಗ್ಯ!

ಏಳು ವರ್ಷದ ಚಿಕ್ಕ ಚೊಕ್ಕ ಹುಡುಗಿಯೊಬ್ಬಳು ಪೇಟೆಯ ಅಂಗಡಿಯೊಂದನ್ನು ಹೊಕ್ಕು ಎಂದಳು: "ನನ್ನ ಪುಟ್ಟ ಗೊಂಬೆಗೆ ಲಂಗ ಹೊಲಿಯಲಿಕ್ಕೆ ನನಗೆ ಸ್ವಲ್ಪ ಅರಿವೆ ಬೇಕು."

ಅಂಗಡಿಗಾರನು ಒಂದು ಅರಿವೆಯ ತುಂಡನ್ನು ಆರಿಸಿ ಕಟ್ಟಿ ಅವಳ ಕೈಗೆ ಕೊಟ್ಟನು.

"ಇದರ ಕ್ರಯ ಎಷ್ಟು!" ಹುಡುಗಿಯ ಸವಾಲು.

"ಬರೇ ಒಂದು ಮುತ್ತು." ಅಂಗಡಿಗಾರನ ಜವಾಬು.

"ಆಗಬಹುದು," ಹೊರಗೆ ಹೋಗಲು ತಿರುಗುತ್ತ ಹುಡುಗಿ ಎಂದಳು. "ಅಜ್ಜಿ ಹೇಳಿದ್ದಾರೆ, ನಾಳೆ ಇಲ್ಲಿ ಬಂದಾಗ ಅವರು ಕೊಡುತ್ತಾರಂತೆ."

o o o o o o

ಲೊಟ್ಟೆಗೆ ಲೊಳಲೊಟ್ಟೆ!

"ಹೇಟೆಗಳ ವಿಷಯ ಮಾತಾಡುವಾಗ ನನ್ನ ಅಪ್ಪನೊಡನಿದ್ದ ಒಂದು ಹೇಟೆಯ ನೆನಪಾಗುತ್ತದೆ," ಕಿಟ್ಟಪ್ಪನೆಂದನು. "ಅದು ಚೆಂಡಿನಿಂದ ಹಿಡಿದು

ಲಿಂಬೆಯ ಹಣ್ಣಿನ ವರೆಗೆ ಪ್ರತಿಯೊಂದರ ಮೇಲೂ ಕುಳಿತು ಕಾವು ಕೊಡು ತ್ತಿತ್ತು. ಒಮ್ಮೆ ಅದು ಒಂದು ಆಯರ್ನ್ ತುಂಡಿನ ಮೇಲೆ ಕೂತು ಕಾವು ಕೊಟ್ಟು ಎರಡು ಕುತ್ತಿ ಬಿಸಿ ನೀರನ್ನು ಹೊರಗೆಡಹಿತು."

"ಒಹೋ!" ವಿಟ್ಟಪ್ಪನೆಂದನು. "ಆದರೆ ಒಮ್ಮೆ ನನ್ನ ಅಮ್ಮನೊಡ ನಿದ್ದ ಒಂದು ಗಿಡ್ಡ ಕಾಲಿನ ಹೇಟೆಗೆ ಇದು ಎಷ್ಟು ಮಾತ್ರಕ್ಕೂ ಸರಿದೂ ಗದು. ಅವಳು ಅದಕ್ಕೆ ಕೈತಪ್ಪಿನಿಂದ ಹಿಂಡಿಯ ಬದಲು ಗರಗಸದ ಹುಡಿ ಯನ್ನು ತಿನ್ನಹಾಕುತ್ತಿದ್ದಳು. ಅದು ಹನ್ನೆರಡು ಮೊಟ್ಟೆಗಳನ್ನು ಇಟ್ಟು ಅವುಗಳಿಗೆಲ್ಲ ಕಾವು ಕೊಡತೊಡಗಿತು. ಅವು ಒಡೆದಾಗ ಹನ್ನೊಂದು ಮರಿಗಳಿಗೆಲ್ಲ ಮರಕಾಲುಗಳಿದ್ದುವು; ಅಲ್ಲದೆ ಹನ್ನೆರಡನೆಯದು ಮರ ಕುಟಿಗನಾಗಿತ್ತು."

ೲ ೲ ೲ ೲ ೲ ೲ

ವಿವೇಚನೆ

ಇತ್ತೀಚೆಗೆ ಒಂದು ಪಟ್ಟಣದಲ್ಲಿ ಭೂಕಂಪವಾಗಿ ಜನರೆಲ್ಲ ಗಾಬರಿ ಗೊಂಡರು. ಆಗ ದಂಪತಿಗಳಿಬ್ಬರು ತಮ್ಮ ಚಿಕ್ಕ ಹುಡುಗರನ್ನು ದೂರದ ಊರಿನಲ್ಲಿದ್ದ ಅವನ ಚಿಕ್ಕಪ್ಪನಲ್ಲಿಗೆ ಕಳುಹಿಸಿಕೊಟ್ಟರು. ಮತ್ತು, "ಇಲ್ಲಿ ಭೂಕಂಪವಿರುವುದರಿಂದ ಈ ಹುಡುಗನು ಸದ್ಯಕ್ಕೆ ನಿಮ್ಮಲ್ಲಿರಲಿ," ಎಂದು ಪತ್ರಬರೆದರು.

ಒಂದೆರಡು ದಿನಗಳಲ್ಲೇ ಆ ಹುಡುಗನ ತಂದೆಗೆ ಈ ತಂತಿವಾರ್ತೆ ಬಂತು:

"ನಿಮ್ಮ ಹುಡುಗನನ್ನು ಹಿಂದೆ ಕಳುಹಿಸುತ್ತಿದ್ದೇನೆ; ಭೂಕಂಪವನ್ನು ಇಲ್ಲಿಗೆ ರವಾನಿಸಿ."

ೲ ೲ ೲ ೲ ೲ ೲ

ವಿಹಿತವಾದ ಹಿತವಾದ

ದೇಶಭಕ್ತನಾದ ಉಮೇದ್ವಾರನೊಬ್ಬನು ಒಬ್ಬ ಒಕ್ಕಲಿಗನನ್ನು ಆತನ ವೋಟಿಗಾಗಿ ಪ್ರಾರ್ಥಿಸಿದನು. "ನಾನು ಚುನಾಯಿತನಾಗಿ ಬಂದರೆ ಈಗಿನ ಮಂತ್ರಿಮಂಡಲವನ್ನು ಕೆಳದಬ್ಬಿ ಹೊಸ ಮಂತ್ರಿಮಂಡಳದ ರಚನೆಗೆ ನನ್ನ ವರ್ಚಸ್ಸನ್ನು ಉಪಯೋಗಿಸುವೆನು," ಅವನು ಆಶ್ವಾಸನೆ ಕೊಟ್ಟನು.

"ಹಾಗಾದರೆ ನಾನು ನನ್ನ ವೋಟನ್ನು ನಿಮಗೆ ಕೊಡುವುದಿಲ್ಲ," ಒಕ್ಕಲಿಗನೆಂದನು.

"ಯಾಕೆ?" ಉಮೇದ್ವಾರನ ಸವಾಲು.

"ನೀವು ದೇಶದ ಹಿತೈಷಿಗಳೆಂದು ನಾನು ಎಣಿಸಿದ್ದೆ." ಒಕ್ಕಲಿಗನ ಜವಾಬು.

"ನಾನು ದೇಶದ ಹಿತೈಷಿಯೇ ಆಗಿರುವೆನಲ್ಲ!"

"ನಾನೂ ದೇಶದ ಹಿತೈಷಿಯೇ ಆಗಿರುವೆನು. ಅದಕ್ಕಾಗಿಯೇ ನಾನು ಮಂತ್ರಿಮಂಡಲದ ಬದಲಾವಣೆಯನ್ನು ಬಯಸುವುದಿಲ್ಲ. ಹಂದಿಗಳನ್ನು ಕೊಂಡುಕೊಳ್ಳುತ್ತಲೇ ಅವು ತಿಂಡಿಪೋತರಂತೆ ತಿನ್ನತೊಡಗುತ್ತವೆ. ಆದರೆ ಅವು ಒಮ್ಮೆ ಸ್ವಲ್ಪ ಕೊಬ್ಬಿದುವೆಂದರೆ ಅವುಗಳನ್ನು ಸಾಕಲು ಮತ್ತೆ ಮೊದಲಿನ ಅರೆವಾಸಿ ಆಹಾರ ಕೂಡ ಬೇಕಾಗುವುದಿಲ್ಲ. ಆದುದರಿಂದ ನಾನು ಈಗಿನ ಮಂತ್ರಿಮಂಡಲವನ್ನೇ ಇರಗೊಳಸಬೇಕೆಂದು ಬಯಸುತ್ತೇನೆ. ಅದು ಹೊಸ ಮಂತ್ರಿಮಂಡಲದ ಅರೆವಾಸಿಯಷ್ಟನ್ನೂ ನುಂಗಲು ಶಕ್ತವಾಗದು."

o o o o o o

ರಕ್ತದ ಮಹಿಮೆ

ಜೂಜಿನ ಕುದುರೆಗಳಿಗೆ ಪ್ರಖ್ಯಾತನಾದ ಕರ್ನಲನೊಬ್ಬನು ಒಮ್ಮೆ ತನ್ನ ಹನಿಸಕ್ಲ್ ಎಂಬ ಕುದುರೆಯು ಪ್ರಪಂಚದಲ್ಲೇ ಅದ್ವಿತೀಯವೆಂದು ಹೆಮ್ಮೆಯಿಂದ ಕೊಚ್ಚಿದನು.

"ಕೇಳಿ," ಕರ್ನಲನು ಎಂದನು. "ಒಂದು ಸಲ ಹದಿನಾರು ಪ್ರಖ್ಯಾತ ಕುದುರೆಗಳ ಒಂದು ಪಂದ್ಯದಲ್ಲಿ ಹನಿಸಕ್ಲ್ ಕೂಡ ಭಾಗವಹಿಸಿತ್ತು. ಅಂದಿನ ಬಹುಮಾನ ಮೂರು ಲಕ್ಷ ಡೊಲ್ಲರು. ಪ್ರಪಂಚದ ಅತ್ಯುತ್ತಮ ಕುದುರೆಗಳ ಧನಿಗಳೆಲ್ಲರೂ ಅಲ್ಲಿ ಹಾಜರಿದ್ದರು. ಹನಿಸಕ್ಲ್ ಪ್ರಾರಂಭದಿಂದಲೂ ಓಟದಲ್ಲಿ ಮುಂದಾಗಿಯೇ ಇತ್ತು. ನನಗೆ ಅದೇನೂ ವಿಚಿತ್ರಕಾಣಿಸಲಿಲ್ಲ. ಆದರೂ ಅದು ನಡುನೆ ಫಕ್ಕನೆ ಒಂದಿಷ್ಟು ಕುಗ್ಗಿದಂತೆ ತೋರಿತು. ಏನೆಂದು ನೋಡಲು ಅದು ಮರಿ ಈಯುತ್ತಿತ್ತೆಂದು ತಿಳಿಯಿತು."

ಇಷ್ಟು ಕೇಳುವಾಗ ಒಬ್ಬನು ಸಹಾನುಭೂತಿಯಿಂದ ಎಂದನು: "ಛೆ! ಪಂದ್ಯದಲ್ಲಿ ಅಂತಹ ಕಾರಣದಿಂದ ಸೋಲುವುದು ಎಷ್ಟು ಬೇಜಾರು!"

"ಸೋಲುವುದು?" ಕರ್ನಲನು ದನಿಯೇರಿಸುತ್ತ ಎಂದನು. "ಯಾರೆಂದರು ಹಾಗೆಂದು? ಹನಿಸಕ್ಲ್ ಎಂದೆಂದೂ ಸೋಲಲೇ ಇಲ್ಲ. ಅದು ಮರಿ ಈದಿತು, ಖರೆ, ಆದರೂ ಐದು ಹೆಜ್ಜೆ ಮುಂದಾಗಿ ಗೆದ್ದೇ ಬಿಟ್ಟಿತು. ಮಾತ್ರವಲ್ಲ, ಅದರ ಮರಿಯು ಪಂದ್ಯದಲ್ಲಿ ಎರಡನೆ ಸ್ಥಾನವನ್ನು ಪಡೆಯಿತು."

o o o o o o

ಸಹಾನುಭೂತಿ

ರಾಮಪ್ಪ, ದೂಮಪ್ಪ ಕೂಡಿ ಇನ್ನು ಮುಂದೆ ಇಬ್ಬರೂ ಕುಡಿಯುವ ಚಟವನ್ನು ಬಿಡುವುದೆಂದು ಒಪ್ಪಂದ ಮಾಡಿಗರು. ಆದರೆ ರಾಮಪ್ಪನು, ಅಸೌಖ್ಯಬಿದ್ದರೆ ಮಾತ್ರ ಕುಡಿಯಬಹುದೆಂದು ಶರ್ತಹಾಕಿ, ಒಂದು ಸೀಸೆ ವ್ಹಿಸ್ಕಿಯನ್ನು ಕಪಾಟಿನಲ್ಲಿ ಇರಿಸಿದನು.

ಮೂರು ದಿನ ಕಳೆಯಬೇಕಾದರೆ ದೂಮಪ್ಪನು ಮದ್ಯದ ಬಾಯಾರಿಕೆಯನ್ನು ತಡೆಯದಾದನು. ಒಡನೆ, "ರಾಮಪ್ಪ, ನನಗೆ ಸೌಖ್ಯವಿಲ್ಲ," ಎಂದು ಕಪಾಟಿನ ಕಡೆಗೆ ಹೋಗುತ್ತ ಎಂದನು.

"ಸಮಯ ಮೀರಿತು, ದೂಮಪ್ಪ! ನಿನ್ನೆ ಇಡೀ ದಿನ ನನಗೆ ಸೌಖ್ಯವಿರಲಿಲ್ಲ," ರಾಮಪ್ಪನು ವ್ಯಥೆಯಿಂದ ಉತ್ತರಕೊಟ್ಟನು.

ಒಂದಾಣೆ ಮಾಲೆ ಎಲ್ಲರಿಗಾಗಿ ಇದೆ

ಒಂದಾಣೆ ಮಾಲೆಯಲ್ಲಿ
ಈ ವರೆಗೆ ಪ್ರಕಟವಾದ ಪುಸ್ತಕಗಳು

೧. *ಕೆಪ್ಪಟೆರಾಯ (ವಿನೋದ ಕಥೆ) ಲೇ: ದಿ| ಎಮ್. ಎನ್. ಕಾಮತ್

೨. ನಾರೀಶ್ವರರು (ಏಕಾಂಕ ಪ್ರಹಸನ)

೩. *ಕಳ್ಳನಿಗೆ ಸಂಭಾವನೆ ಮತ್ತು ಇತರ ಕಥೆಗಳು

೪. ಸದ್ರಿಸುಬ್ಬ (ಏಕಾಂಕ ಪ್ರಹಸನ) ಲೇ: ದಿ| ಎಮ್. ಎನ್. ಕಾಮತ್

೫. ಅದ್ಭುತ ತ್ಯಾಗ ಮತ್ತು ಇತರ ಕಥೆಗಳು
ಸಂಗ್ರಾಹಕರು: ವೈದ್ಯಗುರು ಎಮ್. ಆರ್. ಭಟ್

೬. ಚುನಾವಣೆ ಅರ್ಥಾತ್ ಬನಾವಣೆ (ಏಕಾಂಕ ಪ್ರಹಸನ)

೭. 'ಬೀಡಿಸೇದಬೇಡಿ' ಮತ್ತು 'ಆ ಮಗು' (ವಿನೋದ ಕಥೆಗಳು)
ಲೇ: ದಿ| ಎಮ್. ಎನ್. ಕಾಮತ್

೮. ಇಂಗ್ಲಿಷ್-ಕನ್ನಡ ಅರ್ಥಕೋಶ (ಭಾರತ ಸಂವಿಧಾನದಲ್ಲಿ ಉಪಯೋಗಿಸಲ್ಪಟ್ಟ ಕೆಲವು ಇಂಗ್ಲಿಷ್ ಶಬ್ದಗಳಿಗೆ ಸಮಾನಾರ್ಥ ಶಬ್ದಗಳು)

೯. ಲಂಚಕ್ಕೆ ಸಂಚಕಾರ ಮತ್ತು ಇತರ ವಿನೋದ ಕಥಾನಕಗಳು
(ಲೇ: ಡಾ| ಎಸ್. ಪಿ. ಭಟ್.)

* ಈ ಗುರುತು ಹಾಕಿದ ಪುಸ್ತಕಗಳ ಪ್ರತಿಗಳು ಮುಗಿದಿವೆ.

ಒಂಭತ್ತು ಆಣೆಗಳಿಗೆ, ಹೊದಿಕೆ (ಕವರು) ಕೂಡಿ 216 ಪುಟಗಳನ್ನು 'ಒಂದಾಣೆಮಾಲೆ' ಕೊಟ್ಟಿದೆ.

ವಾರಕ್ಕೊಂದು ಉತ್ತಮ ಪುಸ್ತಕ.

ಒಂದಾಣೆ ಮಾಲೆ,

ಪ್ರಭಾತ ಆಫೀಸು, ರಥಬೀದಿ, ಮಂಗಳೂರು-1.

ಎಲ್ಲರಿಗೆ ಬೇಕಾದುದು ಒಂದಾಣೆ ಮಾಲೆಯಲ್ಲಿದೆ.

Edited, Printed and Published by K. V. Shenoy
at The Prabhat Printers, Ltd., Mangalore-1.